ವಿವಿಧ ಆಭರಣಗಳ ಮಾಲೆಯನ್ನು ಹಾಕಿ ಸತ್ಕರಿಸಿದ. ಆದರೆ ಹಾಗೆ ಹಾಕಿ ಹೀಗೆ ತಿರುಗುವಷ್ಟರಲ್ಲಿ ಅವೆಲ್ಲ ಮಾಯವಾಗಿದ್ದವು. ಮಂತ್ರಿಗೆ ಜ್ಞಾನೋದಯವಾಯಿತು. ಮತ್ತೆ ಕಾಲು ಹಿಡಿದು ಕ್ಷಮೆ ಯಾಚಿಸಿದ. ಆ ಮನುಷ್ಯ ಸುಮ್ಮನೆ ಮತ್ತೊಮ್ಮೆ ನಕ್ಕ. ಮೊದಲಿನಂತೆ ಮತ್ತೊಮ್ಮೆ ಮಾತನಾಡುವ ಗಿಳಿ ಹೊರಬಂತು. 'ನಿನ್ನ ಈ ಹಾರ ತುರಾಯಿಗಳು ಯಾರಿಗೆ ಬೇಕು? ಮೊದಲು ನಿನ್ನ ರಾಜ ಇರುವಲ್ಲಿಗೆ ಕರೆದುಕೊಂಡು ಹೋಗು' ಎಂದು ಮಂತ್ರಿಗೆ ಹೇಳಿ ಮತ್ತೆ ಮಾಯವಾಯಿತು. ಮಂತ್ರಿ ಆ ಮನುಷ್ಯನನ್ನು ನೇರವಾಗಿ ರಾಜನ ಹತ್ತಿರ ಕರೆದುಕೊಂಡು ಹೋದ.

ರಾಜ ಹಾಸಿಗೆಗೆ ಮುಖಮಾಡಿ ಬೆನ್ನು ಮೇಲೆ ಮಾಡಿಕೊಂಡು ಒಂದೇ ಸಮನೆ ನರಳುತ್ತಿದ್ದ. ಅವನ ಕೆಲವು ರಾಣಿಯರು ಚಾಮರ ಬೀಸುತ್ತಾ ಅವನ ಗಾಯದ ನೋವನ್ನು ಶಮನ ಮಾಡಲು ಪ್ರಯತ್ನಿಸುತ್ತಿದ್ದರು. ಆದರೆ ರಾಜನ ಗೋಳು ಹೇಳದಾಗಿತ್ತು. ಮಂತ್ರಿ ರಾಜನ ಕಿವಿಯಲ್ಲಿ ಒಬ್ಬ ವಿಚಿತ್ರ ಮನುಷ್ಯ ಬಂದಿರುವ ವಿಷಯವನ್ನು ಹೇಳಿದ. ಎಲ್ಲರ ಮೇಲೂ ರಾಜನಿಗೆ ನಂಬಿಕೆ ಹೊರಟು ಹೋಗಿತ್ತು. ಬಂದವರೆಲ್ಲ ಔಷಧಿ ನೀಡುವ ನೆಪದಲ್ಲಿ ತನ್ನ ಗಾಯವನ್ನು ಹೆಚ್ಚು ಮಾಡಿದರು. ಒಂದು ಹುಣ್ಣು ಹೋಗಿ ಏಳು ಹುಣ್ಣುಗಳಾದವು ಎಂಬುದು ಅವನ ತಾತ್ಸಾರಕ್ಕೆ ಕಾರಣವಾಗಿತ್ತು. ಆ ವಿಚಿತ್ರ ಮನುಷ್ಯನನ್ನು ಅರಮನೆಯಿಂದ ಆಚೆ ಕಳಿಸು ಎಂಬುದು ಅವನ ಸೂಚನೆಯಾಗಿತ್ತು. ರಾಜನ ಸೂಚನೆಯನ್ನು ಮಂತ್ರಿ ಅವನಿಗೆ ತಿಳಿಸಿದ. ಆ ಮನುಷ್ಯ ಮತ್ತೆ ನಕ್ಕ. ಅವನ ಬಾಯಿಂದ ತಂಪಾದ ಜಡಿ ಮಳೆಯಂಥ ಹನಿಗಳು ಉದುರತೊಡಗಿದವು. ಉರಿಯುತ್ತಿದ್ದ ರಾಜನ ಹುಣ್ಣುಗಳು ಸ್ವಲ್ಪ ತಂಪಾಗಿ ನೋವು ಕಡಿಮೆಯಾದಂತಾಯಿತು. ಮಲಗಿದ್ದ ರಾಜ ಎದ್ದು ಕೂತ. ವಿಚಿತ್ರ ಮನುಷ್ಯನನ್ನು ದೃಷ್ಟಿಯಿಟ್ಟು ನೋಡಿದ. ಅವನ ಕಣ್ಣುಗಳು ಹೊಳೆಯುತ್ತಿದ್ದವು. ಅವನ ನಾಗಬೆತ್ತದಲ್ಲಿದ್ದ ಹಲವು ಪ್ರಾಣಿಗಳು ರಾಜನನ್ನು ಅಣಕಿಸುವಂತೆ ಕಂಡವು. ರಾಜನಿಗೆ ಆ ಮನುಷ್ಯನ ಬಗ್ಗೆ ಗೌರವ ಉಂಟಾಯಿತು. ಮೆಲ್ಲಗೆ ಎದ್ದ ರಾಜ ಆ ಮನುಷ್ಯನ ಕಾಲಿಗೆ ಬಿದ್ದು ತನ್ನ ಹುಣ್ಣನ್ನು ವಾಸಿ ಮಾಡುವಂತೆ ದೈನ್ಯದಿಂದ ಬೇಡಿಕೊಂಡನು. ಆ ವಿಚಿತ್ರ ಮನುಷ್ಯ ರಾಜನನ್ನೇ ನೋಡುತ್ತಾ ಸುಮ್ಮನೆ ನಕ್ಕನು. ಅವನ ನಾಗಬೆತ್ತದಲ್ಲಿ ಕೆತ್ತಲಾಗಿದ್ದ ಸಕಲೆಂಟು ಪ್ರಾಣಿಗಳೂ ಜೀವ ಪಡೆದು ರಾಜನ ಮಂಚದ ಸುತ್ತ ಸುತ್ತತೊಡಗಿದವು. ವಿಚಿತ್ರ ದನಿಯಲ್ಲಿ ರೋದಿಸತೊಡಗಿದವು. ಆ ಸನ್ನಿವೇಶ ರಾಜನಲ್ಲಿ ಭಯವನ್ನು ಉಂಟು ಮಾಡಿತು. ಏನೂ ತೋಚದೆ ಮತ್ತೊಮ್ಮೆ ಆ ವ್ಯಕ್ತಿಯ ಕಾಲ ಮೇಲೆ ಬಿದ್ದು ತನ್ನ ಹುಣ್ಣುಗಳನ್ನು ವಾಸಿ ಮಾಡುವಂತೆ ಬೇಡಿಕೊಂಡನು. ವಿಚಿತ್ರ ಮನುಷ್ಯ ಮತ್ತೊಮ್ಮೆ ನಕ್ಕನು. ಆಗ ಅವನ ಬಾಯಿಂದ ಮಾತನಾಡುವ ಗಿಳಿ ಹೊರಬಂತು. ಅದು ರಾಜನನ್ನು ಕುರಿತು ಹೀಗೆ ಹೇಳತೊಡಗಿತು: 'ಎಲವೋ ರಾಜನೆ, ನೀನು ದೊಡ್ಡ ತಪ್ಪು ಮಾಡಿದ್ದೀಯಾ, ಪ್ರಜೆಗಳನ್ನು ಕಾಪಾಡಬೇಕಾದ ನೀನು ಅವರನ್ನೇ ಸುಲಿಗೆ ಮಾಡಿದ್ದೀಯಾ, ಪ್ರಾಣಿ ಪಕ್ಷಿಗಳನ್ನು ರಕ್ಷಿಸಬೇಕಾದ ನೀನು ಅವುಗಳನ್ನು ಕೊಂದಿದ್ದೀಯಾ, ಅಥವಾ ಮಾರಾಟ ಮಾಡಿದ್ದೀಯಾ, ಮರಗಿಡಗಳನ್ನು ಬೆಳೆಸಬೇಕಾದ ನೀನು ಅವುಗಳನ್ನು ನಾಶ ಮಾಡಿದ್ದೀಯ. ಇದಕ್ಕಿಂತ ಪಾಪಕರ್ಮ ಇನ್ನೊಂದಿಲ್ಲ. ಈಗ ಈ ಹುಣ್ಣುಗಳಿಂದ ಪಾರಾಗಬೇಕಾದಲ್ಲಿ ನಾನು ಹೇಳಿದಂತೆ ಕೇಳಬೇಕು. ನಾನು ಹೇಳಿದಂತೆ ಮಾಡಬೇಕು. ಅದು ನಿನ್ನಿಂದ ಸಾಧ್ಯವೆ?' ಎಂದು ಕೇಳಿತು. ಅದಕ್ಕೆ ರಾಜ, 'ನಾನು ನನ್ನ ಎಲ್ಲ ಚಿನ್ನವನ್ನೂ ಮತ್ತು ಅರ್ಧ ರಾಜ್ಯವನ್ನೂ ನೀಡುತ್ತೇನೆ. ನನ್ನ ಹುಣ್ಣು ವಾಸಿಯಾಗಲಿ' ಎಂದು ಹೇಳಿದ. ರಾಜನ ಮಾತನ್ನು ಕೇಳಿದ ವಿಚಿತ್ರ ಮನುಷ್ಯ ಮತ್ತೊಮ್ಮೆ ನಕ್ಕ. ಆಗ ಅವನ ನಾಗಬೆತ್ತ ದೊಡ್ಡ ಸರ್ಪದ ರೂಪ ತಾಳಿ ಬುಸುಗುಟ್ಟುತ್ತಾ ರಾಜನ ಮೈಯನ್ನು ಸುತ್ತುವರೆಯಿತು. ಹೆದರಿ ಕಂಗಾಲಾದ ರಾಜ ನನ್ನ ಪ್ರಾಣ ಉಳಿಯುವುದಿದ್ದರೆ ನೀವು ಹೇಳಿದ ಏನನ್ನಾದರೂ ಮಾಡಲು ಸಿದ್ಧ ಎಂದು ಅಂಗಲಾಚಿ ಬೇಡಿದ. ತಕ್ಷಣ ಸರ್ಪ ಮತ್ತೆ ನಾಗಬೆತ್ತವಾಗಿ ಪರಿವರ್ತಿತವಾಯಿತು. ಆಗ ಮತ್ತೆ